ದಿನಾಂಕಃ **29.06.2024** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು : **23** ರಿಂದ **26** ನೇ ಪ್ರತಿವಾದಿಯ ಪರ ಶ್ರೀ ಎ.ಆರ್.ಜಿ. ವಕೀಲರಿಂದಃ

05. 1940 ರಿಂದ 1950 ನೇ ಇಸವಿಯವರೆಗೆ ನಮ್ಮ ಮನೆಯ ಯಜಮಾನಿಕೆಯನ್ನು ಯಾರು ಮಾಡುತ್ತಿದ್ದರು ಎಂದರೆ 2 ನೇ ಹೆಂಡತಿಯ ಮಗನಾದ ರಾಮಾ ನಾಯ್ಕ ಮಾಡುತ್ತಿದ್ದರು. ನನ್ನ ಅಜ್ಜನಿಗೆ ಮೊದಲನೇ ಮದುವೆ ಯಾವಾಗ ಆಗಿತ್ತು ಮತ್ತು 2 ನೇ ಮದುವೆ ಯಾವಾಗ ಆಗಿತ್ತು ಎಂದರೆ ನನಗೆ ಡೇಟ್ ಗೊತ್ತಿಲ್ಲ. ರಾಮಾ ನಾಯ್ಕ ಯಾವ ದಿನಾಂಕದಲ್ಲಿ ಜನಿಸಿದ್ದರು ಎಂದು ನನಗೆ ಗೊತ್ತಿಲ್ಲ. ರಾಮಾ ನಾಯ್ಕ ಮತ್ತು ವಸನ್ಯಾ ನಾಯ್ಕ ಇವರಲ್ಲಿ ರಾಮಾ ನಾಯ್ಕನೇ ಹಿರಿಯರು. ವಸನ್ಯಾ ನಾಯ್ಕ ಮೊದಲನೇ ಹೆಂಡತಿಯ ಮಗನಾಗಿದ್ದು ಆತನೇ ಹಿರಿಯರು ಎಂದರೆ ಸರಿಯಲ್ಲ. ದಾವಾ ಐಟಮ್ 3 ರಲ್ಲಿ ಒಟ್ಟು 16 ಎಕರೆ 40 ಸೆಂಟ್ಸ್ ಪೈಕಿ 5.50 ಎಕರೆಯನ್ನು ದಿನಾಂಕಃ 25.09.1947 ರಂದು ವಸನ್ಯಾ ನಾಯ್ಕನು 27 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ದಿನಾಂಕಃ 26.03.1949 ರಂದು ಇದೇ ಸರ್ವೇ ನಂಬರ್ ಪೈಕಿ 10 ಎಕರೆ 50 ಸೆಂಟ್ಸ್ ಜಮೀನನ್ನು ನನ್ನ ಅಜ್ಜ ಕ್ರಯ ಮಾಡಿದ್ದಾರೆ ಎಂದರೆ ಸರಿಯಲ್ಲ 1949 ರ ಕ್ರಯ ಪತ್ರದ ಚೆಕ್ಕುಬಂದಿಯ ಉತ್ತರಕ್ಕೆ1947 ರಲ್ಲಿ ಖರೀದಿ ಮಾಡಿದ ದಂಡಿನ ಗುಂಡೂರಾವ್ ಜಮೀನು ಇದೆ ಎಂದು ಉಲ್ಲೇಖವಾಗಿದೆ ಎಂದರೆ ಸರಿಯಲ್ಲ. ಒಟ್ಟು 16 ಎಕರೆ 40 ಸೆಂಟ್ಸ್ ಪೈಕಿ ಎರಡು ಕ್ರಯ ಪತ್ರಗಳಡಿಯಲ್ಲಿ 16 ಎಕರೆ ಮಾರಾಟವಾಗಿದ್ದು ನಮಗೆ ಕೇವಲ 40 ಸೆಂಟ್ಸ್ ಮಾತ್ರ ಉಳಿದಿದೆ ಎಂದರೆ ಸರಿಯಲ್ಲ 1968 ರಿಂದ ಅವರ ಮರಣ ದಿನಾಂಕದವರೆಗೆ 23 ರಿಂದ 26 ಪ್ರತಿವಾದಿಗಳ ತಂದೆ ಸಾಮ್ಯಾ ನಾಯ್ಕರವರೇ ಸದರಿ 10 ಎಕರೆ 50 ಸೆಂಟ್ಸ್ ಜಮೀನಿನಲ್ಲಿ ಸ್ವಾಧೀನ ಹೊಂದಿದ್ದರು ಎಂದರೆ ಸುಳ್ಳು, ಮೋಸ ಮಾಡಿ ಮಾಡಿಸಿಕೊಂಡಿದ್ದಾರೆ. ಸಾಮ್ಯಾ ನಾಯ್ಕ ಮೃತಪಟ್ಟ ನಂತರ ಆತನ ಹೆಂಡತಿ ಮಂಗ್ಲಿಬಾಯಿಗೆ 2003 ರಲ್ಲಿ ಪೌತಿ ಖಾತೆಯಾಗಿದ್ದು ಇಲ್ಲಿಯವರೆಗೆ ಆಕೆಯ ಹೆಸರೇ ನಮೂದಾಗುತ್ತಿದೆ ಎಂದರೆ ನಮಗೆ ಗೊತ್ತಿಲ್ಲದೇ ಮಾಡಿಕೊಂಡಿದ್ದಾರೆ. ನಮ್ಮ ಅಜ್ಜ ಕ್ರಯಕ್ಕೆ ಕೊಟ್ಟ 1949 ರಿಂದ ಈ ದಿನಾಂಕದವರೆಗೂ ಸದರಿ 10 ಎಕರೆ 50 ಸೆಂಟ್ಸ್ ಜಮೀನಿನಲ್ಲಿ 23 ರಿಂದ 26 ನೇ ಪ್ರತಿವಾದಿಗಳ ಕುಟುಂಬದವರೇ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ. ನನಗೆ ಸದರಿ 10 ಎಕರೆ 50 ಸೆಂಟ್ಸ್ ಜಮೀನಿನ ಕ್ರಯವನ್ನು ಪ್ರಶ್ನೆ ಮಾಡಲು ಯಾವುದೇ ಹಕ್ಕು ಇರುವುದಿಲ್ಲವೆಂದರೆ ಸರಿಯಲ್ಲ. ವಸನ್ಯಾ ನಾಯ್ಕನೇ ಮನೆಯ ಹಿರಿಯನಾಗಿ ವ್ಯವಹಾರಗಳನ್ನು ನಿರ್ವಹಣೆ ಮಾಡುತ್ತಿದ್ದು ಆತ ಬರೆದುಕೊಟ್ಟ ಕ್ರಯ ಪತ್ರ ಊರ್ಜಿತವಾಗಿಯೇ ಇದೆ ಎಂದರೆ ಸರಿಯಲ್ಲ. ಪಹಣಿಗಳಲ್ಲಿ ರಾಮಾ ನಾಯ್ಕನ ಹೆಸರಿನ ಮುಂದೆ ಪ್ರತ್ಯೇಕವಾಗಿ ವಿಸ್ತೀರ್ಣ ನಮೂದಾಗದೇ ಇರುವುದರಿಂದ ನಾನು ಎಲ್ಲರನ್ನು ಸೇರಿಸಿ ದಾವೆ ಹಾಕಿದ್ದೇನೆ ಎಂದರೆ ಸರಿ. ನನ್ನ ಅಜ್ಜನಿಗೆ 40 ಸೆಂಟ್ಸ್ ಬರಬೇಕಿದೆ ಎಂದು

ಪಹಣಿಯನ್ನು ತಿದ್ದುಪಡಿ ಮಾಡಲು ತಹಶೀಲ್ದಾರರ ಮುಂದೆ ನಾನು ಅರ್ಜಿ ಸಲ್ಲಿಸಿದ್ದುಂಟೇ? ಎಂದರೆ ಸಲ್ಲಿಸಿಲ್ಲ. ತೊಂದರೆ ಕೊಡುವ ಉದ್ದೇಶದಿಂದ 23 ರಿಂದ 26 ನೇ ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ: ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೂವಿನ ಹಡಗಲಿ.